# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 29-03-2021 ಪ್ರಶ್ನೆ ಸಂಖ್ಯೆ : 2014 (2347)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 29-03-2021

ಉತ್ತರಿಸುವ ಸಚಿವರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ವಿಷಯ : ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ನೀಡಲಾಗುತ್ತಿರುವ ಲಸಿಕೆಯ ವೆಚ್ಚದ ಕುರಿತು

(ಅ) ಕೋವಿಡ್-19 ಸಾಂಕ್ರಾಮಿಕ ರೋಗಕ್ಕೆ ನೀಡಲಾಗುತ್ತಿರುವ ಲಸಿಕೆಗಾಗಿ ಈವರೆಗೆ ಸರ್ಕಾರದ ವತಿಯಿಂದ ಮಾಡಲಾಗಿರುವ ವೆಚ್ಚವೆಷ್ಟು; ಈ ಲಸಿಕೆಯ ಅವಧಿ ಮೀರುವ (expiry) ಸಮಯ ಎಷ್ಟು; ಇಲ್ಲಿಯವರೆಗೆ ಉಪಯೋಗಿಸದೇ ಅವುಗಳ ಅವಧಿ ಮೀರಿದ ಕಾರಣಕ್ಕೆ ನಾಶಪಡಿಸಿದ ಲಸಿಕೆಗಳ ಸಂಖ್ಯೆ ಎಷ್ಟು; ನಷ್ಟದ ಒಟ್ಟು ಮೊತ್ತವೆಷ್ಟು ;

(ಆ) ಅತೀ ಕಡಿಮೆ ಬಾಳಿಕೆ ಅವಧಿಯನ್ನು (expiry) ಹೊಂದಿರುವ ಲಸಿಕೆಯನ್ನು ಕಾಲಮಿತಿಯಲ್ಲಿ ಸಮುದಾಯಕ್ಕೆ ನೀಡುವ ನಿಟ್ಟಿನಲ್ಲಿ ಸರ್ಕಾರ ಹಾಕಿಕೊಂಡಿರುವ ಯೋಜನೆ ಹಾಗೂ ಸಿದ್ಧತೆಗಳಾವುವು;

(ಇ) ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ನೀಡುವ ಯೋಜನೆ ಇದೆಯೇ; ಇದ್ದಲ್ಲಿ, ಎಷ್ಟು ದರವನ್ನು ನಿಗದಿಪಡಿಸಲಾಗುವುದು; 24x 7 ಲಸಿಕೆ ನೀಡುವ ಯೋಜನೆ ಸರ್ಕಾರಕ್ಕಿದೆಯೇ; ಇಲ್ಲವಾದಲ್ಲಿ, ಕಾರಣವೇನು; ಯಾವಾಗ ಪ್ರಾರಂಭಿಸಲಾಗುವುದು ?